10754

# ಕರ್ನಾಟಕ ಸರ್ಕಾರದ ನಡವಳಿಗಳು

## (ಜಲಸಂಪನ್ಮೂಲ ಇಲಾಖೆ)

ವಿಷಯ:- ತುಂಗಭದ್ರಾ ನದಿಯಿಂದ ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ 10 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಅಂದಾಜು ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:- 1) ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್ ರವರ ಪತ್ರ ಸಂಖ್ಯೆ:ಮುಅ/ನೀಕೇವ/10-11/1396, ದಿ:27.07.2010.
2) ಸರ್ಕಾರಿ ಆದೇಶ ಸಂಖ್ಯೆ: ಸನೀಇ 54 ಕೆಜಿದು 2010, ಬೆಂಗಳೂರು, ದಿ:25.09.2010.
3) ಇದೇ ಸಮ ಸಂಖ್ಯೆಯ ಅ.ಟಿ.ದಿನಾಂಕ:25.09.2010.

ಪ್ರಸ್ತಾವನೆ:-

ಬಳ್ಳಾರಿ ಜಿಲ್ಲೆ, ಹೂವಿನ ಹಡಗಲಿ ತಾಲ್ಲೂಕಿನಲ್ಲಿ ಅತೀ ಕಡಿಮೆ ಪ್ರಮಾಣದ ಮಳೆಯಿಂದಾಗಿ ಕೆರೆಗಳು ತುಂಬುತ್ತಿಲ್ಲವಾದ ಕಾರಣ, ಅಲ್ಲಿನ ಜನರ ಕುಡಿಯುವ ನೀರಿಗೆ ಹಾಗೂ ನೀರಾವರಿಗೆ ತೊಂದರೆಯಾಗಿರುತ್ತದೆ ಅಲ್ಲದೆ, ಕೆರೆಯ ಸುತ್ತಮುತ್ತಲಿನ ಬಾವಿಗಳಲ್ಲಿ ಮತ್ತು ಬೋರ್‌ವೆಲ್‌ಗಳಲ್ಲಿ ಅಂತರ್ ಜಲ ಮಟ್ಟವು ತುಂಬಾ ಕಡಿಮೆಯಾಗಿ ನೀರಾವರಿಯಿಂದ ಆಶ್ರಯಿಸಿದ ರೈತರಿಗೆ ಹಾಗೂ ಕೂಲಿಕಾರರಿಗೆ ತುಂಬಾ ತೊಂದರೆಯಾಗಿರುತ್ತದೆ. ಆದ್ದರಿಂದ, ಜನ, ಜಾನುವಾರುಗಳಿಗೆ ಕುಡಿಯುವ ನೀರನ್ನು ಪೂರೈಸುವ ದೃಷ್ಟಿಯಿಂದ 10 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರನ್ನು ಒದಗಿಸಲು ಯೋಜಿಸಲಾಗಿರುತ್ತದೆ.

| ಕ್ರಸಂ | ತಾಲ್ಲೂಕು | ಕೆರೆಯ ಹೆಸರು | ಕೆರೆಗಳ ನೀರಿನ ಸಂಗ್ರಹಣಾ ಸಾಮರ್ಥ್ಯ (ಎಂಸಿಎಫ್‌ಟ ಯಲ್ಲಿ) |
|---|---|---|---|
| 1 | ಹೂವಿನಹಡಗಲಿ | ಅರಳಿ ಹಳ್ಳಿ ಕೆರೆ | 106.36 |
| 2 | ಹೂವಿನಹಡಗಲಿ | ಹಿರೇಹಡಗಲಿ ಕೆರೆ | 34.99 |
| 3 | ಹೂವಿನಹಡಗಲಿ | ಹಗರನೂರು ಕೆರೆ | 120.67 |
| 4 | ಹೂವಿನಹಡಗಲಿ | ದೇವಗೊಂಡನಹಳ್ಳಿ ಕೆರೆ | 64.70 |
| 5 | ಹೂವಿನಹಡಗಲಿ | ಮುದೇನೂರು ಕೆರೆ(ಆರ್.ಡಿ.ಪಿ.ಆರ್) | 70.00 |
| 6 | ಹೂವಿನಹಡಗಲಿ | ತಳಕಲ್ಲು ಕೆರೆ | 38.12 |
| 7 | ಹೂವಿನಹಡಗಲಿ | ಹಿರೇಮಲ್ಲನಕೇರಿ ಕೆರೆ(ಆರ್.ಡಿ.ಪಿ.ಆರ್) | 35.00 |
| 8 | ಹೂವಿನಹಡಗಲಿ | ಮಲಿಯಮ್ಮನ ಕೆರೆ(ಆರ್.ಡಿ.ಪಿ.ಆರ್) | 62.00 |
| 9 | ಹೂವಿನಹಡಗಲಿ | ದಾಸನಹಳ್ಳಿ ಕೆರೆ | 39.61 |
| 10 | ಹಗರಿಬೊಮ್ಮನಹಳ್ಳಿ | ಬನ್ನಿಕಲ್ಲು ಕೆರೆ | 116.07 |

ಮುಂದುವರೆದಿದೆ..2

ಯೋಜನೆಗೆ ಅಗತ್ಯವಿರುವ 0.50 ಟಿಎಂಸಿ ನೀರನ್ನು ಆಂಧ್ರಪ್ರದೇಶದಿಂದ ಇಂದಿರಾಸಾಗರ (ಪೋಲ್ಲಾವರಂ) ಯೋಜನೆ ಅಡಿಯಲ್ಲಿ ಗೋದಾವರಿ ಕೊಳ್ಳದಿಂದ ಕೃಷ್ಣಾ ಕೊಳ್ಳಕ್ಕೆ 80 ಟಿಎಂಸಿ ನೀರನ್ನು ಮಾರ್ಗ ಪಲ್ಲಟ ಮಾಡುತ್ತಿರುವುದರಿಂದ ರಾಜ್ಯಕ್ಕೆ ಲಭ್ಯವಾಗುವ 23 ಟಿಎಂಸಿ ನೀರಿನ ಪ್ರಮಾಣದಲ್ಲಿ ಕುಡಿಯುವ ನೀರಿನ ಯೋಜನೆ ಅಡಿಯಲ್ಲಿ ಭರಿಸಲಾಗುವುದು.

ಮೇಲೆ ಓದಲಾದ (1) ರಲ್ಲಿ, ಸದರಿ 10 ಕೆರೆಗಳನ್ನು ತುಂಬುವ ಯೋಜನೆಯ ಸಮಗ್ರ ಯೋಜನಾ ವರದಿಯನ್ನು ಹಾಗೂ ಅಂದಾಜನ್ನು ₹76.70 ಕೋಟಿಗಳಿಗೆ ತಯಾರಿಸಿ, ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್ ರವರು ಸಲ್ಲಿಸಿ ಸದರಿ ಅಂದಾಜು ಪ್ರಸ್ತಾವನೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ. ಯೋಜನೆ ಕುರಿತು ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರ ಅಭಿಪ್ರಾಯ ದಿ:27.09.2010 ರಂದು ಪಡೆಯಲಾಗಿರುತ್ತದೆ.

ಈ ಯೋಜನೆಯ ಆಡಳಿತಾತ್ಮಕ ಅನುಮೋದನೆಗೆ ಬೇಕಿರುವ 1/3ನೇ ಭಾಗದ ಅನುದಾನವನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತರವರಿಂದ ಒದಗಿಸಲಾಗುವುದು.

ಮೇಲೆ ಓದಲಾದ (2) ರಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುವ 07 ಕೆರೆಗಳನ್ನು ಹಸ್ತಾಂತರಿಸಲಾಗಿದೆ ಹಾಗೂ ಓದಲಾದ (3) ರಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 03 ಕೆರೆಗಳನ್ನು ಈ ಇಲಾಖೆಗೆ ಹಸ್ತಾಂತರಿಸಲು ಕ್ರಮಕೈಗೊಳ್ಳಲಾಗಿದೆ.

ಪ್ರಸಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಜಸಂಇ 71 ಎಂಟಿಪಿ 2008</u>**
**<u>ಬೆಂಗಳೂರು, ದಿನಾಂಕ 18.10.2010,</u>**

ತುಂಗಭದ್ರಾ ನದಿಯಿಂದ ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ 10 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ₹76.70 ಕೋಟಿ (ಎಪ್ಪತ್ತಾರು ಕೋಟಿ ಎಪ್ಪತ್ತು ಲಕ್ಷ) ಅಂದಾಜು ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಕರ್ನಾಟಕ ನೀರಾವರಿ ನಿಗಮ ನಿಯಮಿತರವರಿಗೆ ವಹಿಸಲಾಗಿದೆ.

ಮುಂದುವರೆದಿದೆ..3

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂ: ಪಿಡಿ 8 ಪಿಪಿಎಂ 2010, ದಿನಾಂಕ:01.10.2010 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: PWD 779 FC-1/10 ದಿನಾಂಕ:01.10.2010 ಗಳ ಸಹಮತದೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿ. ಶ್ರೀನಿವಾಸಲು)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-1)
ಜಲಸಂಪನ್ಮೂಲ ಇಲಾಖೆ

ಇವರಿಗೆ:-

1) ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಮಹಾಲೇಖಪಾಲರು, (ಲೆಕ್ಕಪತ್ರ 1 ಮತ್ತು 2) ಹೊಸಕಟ್ಟಡ, ಬೆಂಗಳೂರು.
3) ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ, ವಿಕಾಸಸೌಧ, ಬೆಂಗಳೂರು.
4) ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
6) ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದ್‌ರಾವ್ ವೃತ್ತ,ಬೆಂಗಳೂರು.
7) ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್.
8) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಸಚಿವ ಸಂಪುಟ (ಪ್ರಕರಣ ಸಂಖ್ಯೆ:ಸಿ:503/2010, ದಿ:04.10.2010), ವಿಧಾನಸೌಧ, ಬೆಂಗಳೂರು.
9) ನಿರ್ದೇಶಕರು, ಯೋಜನಾ ಹಾಗೂ ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10) ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ(ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.